**<u>ಸಾಕ್ಷಿಯನ್ನು ದಿಃ 03.06.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜಿ.ಆರ್.ಕೆ. ವಕೀಲರಿಂದ.</u>**

ಸಾಕ್ಷಿ ಇಂದು ಕಟ್ಟೆಯಲ್ಲಿ ನಿಂತು ತಮ್ಮ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಹಾಗೂ ಅದರಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ತನ್ನದೇ ಎಂದು ಹೇಳಿರುತ್ತಾರೆ.

ಸಾಕ್ಷಿಗೆ ನಿ.ಪಿ. 1 ನ್ನು ತೋರಿಸಲು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿ.ಪಿ. 1(ಎಫ್) ಎಂದು ಗುರುತಿಸಲಾಯಿತು. ನಿ.ಪಿ. 1 ಕ್ಕೆ ಕುಮಾರ್‌ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ನಿ.ಪಿ. 1 ನ್ನು ಪ್ರತಿವಾದಿಗಳು ವಾದಿಗೆ ಬರೆದುಕೊಟ್ಟಿರುತ್ತಾರೆ. ನಿ.ಪಿ. 1 ನ್ನು ಪ್ರತಿವಾದಿಗಳ ಮಾಹಿತಿಯ ಮೇರೆಗೆ ಟಿ.ಬಿ. ಕೃಷ್ಣಯ್ಯ ಎಂಬುವವರು ಬರೆದಿರುತ್ತಾರೆ.

**ಪಾಟೀಸವಾಲಿಗೆ ಸಮಯ ಕೋರಿರುತ್ತಾರೆ. ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

Sd/-
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.